# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಟೆಂಡರ್ ಸಲ್ಲಿಕಾ ಅರ್ಜಿ
## (ಹಣಕಾಸಿನ ಬಿಡ್ ಫಾರಂ)

ಗೆ,

ಮಾನ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಮಾನ್ಯರೇ,

1. ನಾನು:ನಾವು ಪಾವತಿ ಮತ್ತು ನಿಲುಗಡೆಯಲ್ಲಿ ________________________________ ಕಾರ್ಯನಿರ್ವಹಣೆಯ ಬಗ್ಗೆ ಸಂಬಂಧಪಟ್ಟ ಈ ಕೆಳಕಂಡ ದಾಖಲೆಗಳನ್ನು ಓದಿ ಮನದಟ್ಟು ಮಾಡಿಕೊಂಡಿರುತ್ತೇನೆ.
   1. ಟೆಂಡರ್ ಆಹ್ವಾನದ ನೋಟೀಸು
   2. ಸಾಮಾನ್ಯ ನಿಯಮಾವಳಿಗಳು (ಆಪೆಂಡಿಕ್ಸ್ ಎ)
   3. ಗುತ್ತಿಗೆ ಷರತ್ತು ಮತ್ತು ನಿಬಂಧನೆಗಳು (ಆಪೆಂಡಿಕ್ಸ್ ಬಿ)

2. ನಾನು: ನಾವು ಮಾಲಿನ ದಾಖಲೆಗಳನ್ನು ವಿಧಿಸಿರುವಂತಹ ಷರತ್ತು ಮತ್ತು ನಿಬಂಧನೆಗಳನ್ನು ಒಳಪಟ್ಟು ನಿಗಧಿತ ವಿಶಿಷ್ಟತೆ ಅನುಗುಣವಾಗಿ ಪ್ರವೇಶ ಶುಲ್ಕ ವಸೂಲಾತಿಯ ಈ ಪ್ರಸ್ತಪವನ್ನು ಸಲ್ಲಿಸುತ್ತಿದ್ದೇನೆವೆ.

3. ಈ ಪ್ರಸ್ತಾಪಕ್ಕೆ ಪಾವತಿಸಬೇಕಾಂದತ ಇ.ಎಂ.ಡಿ ರೂ.______________ಗಳನ್ನು (ಬಡ್ಡಿ ರಹಿತ) ಕ್ರಾಸ್ ಡಿ.ಡಿ. ಮುಖಾಂತರ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಹೆಸರಿನಲ್ಲಿ ಜಮಾ ಮಾಡತಕ್ಕದ್ದು. ಡಿ.ಡಿ.ಸಂಖ್ಯೆ. ದಿನಾಂಕ: ಹಾಗೂ ಬ್ಯಾಂಕಿನಿಂದ ಖರೀದಿಸಿ ಜಮಾ ಮಾಡಲಾಗಿರುತ್ತದೆ.

4. ಈ ಟೆಂಡರ್ ಪ್ರಸ್ತಪವನ್ನು ಒಪ್ಪಲು ಟೆಂಡರ್ ತೆರೆದ ದಿನಾಂಕದಿಂದ 90 ದಿನಗಳ ಕಾಲ ತೆರೆದಿಡಲಾಗಿದೆ.

5. ನಾನು:ನಾವು ನೊಂದಾಯಿತ ಪಾಲಿದಾರಿಕೆ ಪತ್ರವನ್ನು ಸಲ್ಲಿಸುತ್ತೇವೆಂದಲೂ (ಅನ್ವಯಿಸುವ ಪಕ್ಷದಲ್ಲಿ).

6. ನಗರ ಪಾಲಿಕೆಯು ನಿಷ್ಪಕ್ಷಪಾತವಾಗಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ತನ್ನ ಹಕ್ಕನ್ನು ಈ ಕೆಳಕಂಡ ಸಂದರ್ಭಗಳಲ್ಲಿ ಹೊಂದಿರುತ್ತದೆ.
   ಎ. ನಾನು: ನಾವು ಮೇಲ್ಕಂಡಂತೆ ಟೆಂಡರ್ ಪ್ರಸ್ತಾಪದಲ್ಲಿ ಕೊಡಲು ಒಪ್ಪಿದ ಬೆಲೆಯನ್ನು ಪಾವತಿಸಲು ತಪ್ಪಿದ್ದಲ್ಲಿ

   ಬಿ. ನಾನು:ನಾವು ಅವಶ್ಯ ಗುತ್ತಿಗೆ ಮೊತ್ತ ಪಾವತಿಸಲು ಮತ್ತು ನಗರಪಾಲಿಕೆಯಿಂದ ಒಪ್ಪಿಗೆ ಪತ್ರ ತಲುಪಿದ 5 ದಿನಗಳ ಒಳಗಾಗಿ ಕರಾರು ಪತ್ರ ಮಾಡಿಕೊಂಡು ಡಿಮ್ಯಾಂಡ್ ಡ್ರಾಫ್ಟ್‌ನ್ನು ಪಾವತಿಸಲು ತಪ್ಪಿದ್ದಲ್ಲಿ.

7. ಗುತ್ತಿಗೆಯ ಕಾರ್ಯರೂಪಕ್ಕೆ ತರುವಲ್ಲಿ ಬೇಕಾದಂತಹ ಛಾಪ ಕಾಗದಗಳು, ಛಾಪಾ ಮುದ್ರೆ ಮತ್ತಿತರೆಗಳಿಗೆ ತಗಲುವಂತಹ ವೆಚ್ಚಗಳನ್ನು ಭರಿಸಲು ಸಿದ್ದರಿರುತ್ತೇವೆ.

8. ಈ ಗುತ್ತಿಗೆಯಲ್ಲಿ ಟೆಂಡರ್ ಸಲ್ಲಿಸುವ ಮುನ್ನ ಸ್ಥಳದ ಪರಿಶೀಲನೆ ಮಾಡಿರುತ್ತೇನೆ:ವೆ.

9. ನಾನು:ನಾವು ಬೃಹತ್ ಬೆಂಗಳೂರು ಮಹನಗರ ಪಾಲಿಕೆಯು ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಮೇಲ್ಕಂಡ ಸ್ಥಳದಲ್ಲಿ ಪ್ರವೇಶ ಶುಲ್ಕ ವಸೂಲಾತಿಯಲ್ಲಿ ನಗರ ಪಾಲಿಕೆಯ 1 ವರ್ಷದ ಅವಧಿ ನಿರ್ವಹಿಸಲು ಪರವಾನಗಿ ಶುಲ್ಕ ರೂ.__________________

(ರೂ.______________________________________________________________
ಗಳನ್ನು ಪಾವತಿಸಲು ಒಪ್ಪಿರುತ್ತೇನೆ:ವೆ.

10. ಸಹಿ ಮಾಡಿದ ಆಪೆಂಡಿಕ್ಸ್ ಎ ಮತ್ತು ಬಿ ಹಾಗೂ ನಕ್ಕೆಗಳನ್ನು ಈ ಮುಲಕ ಲಗತ್ತಿಸಲಾಗಿದೆ.

11. ನಾನು/ನಾವು ತಾಂತ್ರಿಕ ಬಿಡ್ ಫಾರಂನೊಂದಿಗೆ ಇ.ಎಂ.ಡಿ ಮೊತ್ತ ರೂ. ಡಿ.ಡಿ ಯನ್ನು ಆಪೆಂಡಿಕ್ಸ್ ಎ ಮತ್ತು ಬಿ ಗಳನ್ನು ಲಗತ್ತಿಸಿರುತ್ತೇನೆ.

ವಿಳಾಸ:ವಾಸಸ್ಥಳ:

_________________________

_________________________

ದೂರವಾಣಿ ಸಂಖ್ಯೆ:_____________________
ಕಛೇರಿ ______________________________

ಪಾಲುದಾರಿಕೆಯ ಸಂಸ್ಥೆಯಾದ ಪಕ್ಷದಲ್ಲಿ:-
ಎಲ್ಲಾ ಪಾಲುದಾರರ ಪೂರ್ಣ ಹೆಸರು
ವಾಸಸ್ಥಳ ವಿಳಾಸಗಳು

ಗುತ್ತಿಗೆದಾರರ: ಸಂಸ್ಥೆಯ ಸಹಿ
ಮತ್ತು ಮೊಹರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಪ್ರವೇಶ ಶುಲ್ಕ ವಸೂಲಾತಿ ಪರವಾನಗಿ ಟೆಂಡರ್

1. ಟೆಂಡರ್‌ದಾರರು/ಬಿಡ್‌ದಾರರು ದಿ: 20-8- 2010 ರಂದು ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 2-30ರ ಒಳಗಾಗಿ ಉಪ ಆಯುಕ್ತರು (ಮಾರುಕಟ್ಟೆ) ರವರ ಕಛೇರಿ ದಾಸಪ್ಪ ಆಸ್ಪತ್ರೆ ಆವರಣ, 2ನೇ ಮಹಡಿ, ಟೌನ್ ಹಾಲ್ ಎದುರು, ಬೆಂಗಳೂರು-560002. ಇಲ್ಲಿ ಸಲ್ಲಿಸತಕ್ಕದ್ದು.

2. ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆ ಪ್ರವೇಶ ಶುಲ್ಕಕ್ಕೆ ತಲಾ ರೂ.50,000.00 (ಐವತ್ತು ಸಾವಿರ ಮಾತ್ರ) ಇ.ಎಂ.ಡಿ. ಮೊತ್ತವನ್ನು ಕ್ರಾಸ್ ಡಿಮ್ಯಾಂಡ್ ಡ್ರಾಪ್ ಮುಖೇನ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಹೆಸರಿನಲ್ಲಿ ಪಾವತಿಸತಕ್ಕದ್ದು.

3. ಈ ಟೆಂಡರ್ ಅವಧಿಯು ಸ್ಥಳವನ್ನು ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದಿಂದ 12 ಇಂಗ್ಲೀಷ್ ಕ್ಯಾಲೆಂಡರ್ ತಿಂಗಳವರೆವಿಗೆ ಚಲಾವಣೆಯಲ್ಲಿರುತ್ತದೆ.

4. ಮೊಹರಿಸಿದ ಟೆಂಡರ್-ಕಂ-ಹರಾಜನ್ನು ಮತ್ತು ಟೆಂಡರನ್ನು ಸಾಧ್ಯವಾದಲ್ಲಿ ದಿ: 20-8-2010 ರಂದು ಮಧ್ಯಾಹ್ನ 3.00 ಗಂಟೆಗೆ ನೆರೆದಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ಅಥವಾ ಮುಂದಿನ ಕಛೇರಿ ಕಾರ್ಯಚರಣೆ ದಿನದಂದು ಬೆಳಿಗ್ಗೆ 11.00 ಗಂಟೆಗೆ ಉಪ ಆಯುಕ್ತರು(ಮಾರುಕಟ್ಟೆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಕಛೇರಿಯಲ್ಲಿ ತೆರೆಯಲಾಗುವುದು.

5. ಹಣಕಾಸು ಬಿಡ್ ಮತ್ತು ತಾಂತ್ರಿಕ ಬಿಡ್ ಫಾರಂಗಳನ್ನು ಟೆಂಡರ್‌ದಾರರ ವಿಳಾಸವುಳ್ಳ ಬೇರೆ ಬೇರೆ ಪ್ರತ್ಯೇಕ ಲಕೋಟೆಗಳಲ್ಲಿ ಮೊಹರು ಮಾಡಿದ ಪೆಟ್ಟಿಗೆಯಲ್ಲಿ ಹಾಕತಕ್ಕದ್ದು.

ಈ ಟೆಂಡರ್: ಬಿಡ್ ನಮೂನೆಯನ್ನು. ______________________________

____________________________________________________

____________________________________________________

____________________ರವರಿಗೆ ನೀಡಲಾಗಿರುತ್ತದೆ.

(ಗುತ್ತಿದಾರರು)

ನಮೂನೆ ನೀಡಲಾದ ಅಧಿಕಾರಿ
ಸಹಿ ಮತ್ತು ದಿನಾಂಕ:

-ಸಹಿ-
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಸಕಂಅ(ಪ-ಮಾ)ಪಿಆರ್/329 /10-11

ಸಹ ಕಂದಾಯ ಅಧಿಕಾರಿ ರವರ ಕಛೇರಿ,
(ಪಶ್ಚಿಮ-ಮಾರುಕಟ್ಟೆ)
ಎಸ್.ಕೆ.ಆರ್.ಮಾರುಕಟ್ಟೆ, 1ನೇ ಮಹಡಿ,
ಬೆಂಗಳೂರು, ದಿನಾಂಕ: 2-8-2010.

## ಪ್ರವೇಶ ಶುಲ್ಕ ಅಲ್ಪಾವಧಿ ಟೆಂಡರ್-ಕಂ-ಹರಾಜು ಪ್ರಕಟಣೆ

2010-11ನೇ ಸಾಲಿನಲ್ಲಿ 1 (ಒಂದು) ವರ್ಷ ಅವಧಿಗೆ ಹಾಗೂ ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆಯ ನಾಲ್ಕು ಮುಖ್ಯದ್ವಾರಗಳಿಗೆ ಪ್ರವೇಶ ಶುಲ್ಕ ವಸೂಲಾತಿ ಮಾಡಲು ಆಸಕ್ತಿಯುಳ್ಳ ಸಾರ್ವಜನಿಕರಿಂದ ಟೆಂಡರ್-ಕಂ.ಹರಾಜು ಆಹ್ವಾನಿಸಲಾಗಿದೆ.

ನಿಗಧಿತ ನಮೂನೆಯ ಅರ್ಜಿಗಳನ್ನು ಹಾಗೂ ಟೆಂಡರ್ ಸಾಮಾನ್ಯ ನಿಬಂಧನೆಗಳನ್ನು ಸಹ ಕಂದಾಯ ಅಧಿಕಾರಿ (ಪಶ್ಚಿಮ-ಮಾರುಕಟ್ಟೆ), ಬೆಂಗಳೂರು-560002. ರವರ ಕಛೇರಿಯಲ್ಲಿ ಪ್ರತಿಯೊಂದು ಟೆಂಡರ್ ಫಾರಂಗೆ ರೂ. 1000-00+10.50% ಗಳನ್ನು ನಗದಾಗಿ ಪಾವತಿ ಮಾಡುವ ಮೂಲಕ ದಿನಾಂಕ: 09-8-2010 ರಿಂದ 19-8-2010 ರವರೆಗೆ ಕೆಲಸದ ವೇಳೆ ಎಲ್ಲಾ ದಿನದಂದು ಬೆಳಿಗ್ಗೆ 11-00 ಗಂಟೆಯಿಂದ ಸಂಜೆ 5-00 ಗಂಟೆಯವರೆಗೆ ಪಡೆಯಬಹುದಾಗಿದೆ.

ಭರ್ತಿಮಾಡಿದ ಟೆಂಡರ್ ಫಾರಂನಲ್ಲಿ ತಾಂತ್ರಿಕ ಮತ್ತು ಹಣಕಾಸಿನ ಟೆಂಡರ್ ಫಾರಂ ಬೇರ್ಪಡಿಸಿ ಎರಡು ಲಕೋಟೆಗಳಲ್ಲಿ ಸಹ ಕಂದಾಯ ಅಧಿಕಾರಿ (ಮಾರುಕಟ್ಟೆ) ರವರ ಹೆಸರಿನಲ್ಲಿ ದಿ: 20-8-2010 ರಂದು ಬೆಳಿಗ್ಗೆ 10-30 ಗಂಟೆಯಿಂದ ಮಧ್ಯಾಹ್ನ 2-30 ಗಂಟೆಯವರೆಗೂ ಉಪ ಆಯುಕ್ತರು (ಮಾರುಕಟೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸಪ್ಪ ಆಸ್ಪತ್ರೆ ಆವರಣ, 2ನೇ ಮಹಡಿ, ಟೌನ್‌ಹಾಲ್ ಎದುರು. ಬೆಂಗಳೂರು-560002. ಈ ಕಛೇರಿಯಲ್ಲಿ ಇಡಲಾಗಿರುವ ಟೆಂಡರ್ ಪೆಟ್ಟಿಗೆಯಲ್ಲಿ ಹಾಕತಕ್ಕದ್ದು, ಟೆಂಡರ್‌ಕಂ/ಹರಾಜು ತೆರೆಯುವಿಕೆಯನ್ನು ಸಾಧ್ಯವಾದರೆ ಅದೇ ದಿನ ಮಧ್ಯಾಹ್ನ 3-00 ಗಂಟೆಗೆ ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ಉಪ ಆಯುಕ್ತರು (ಮಾರುಕಟ್ಟೆ) ರವರು ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಯವರು ತೆರೆಯುವರು.

ಟೆಂಡರ್ ದಾಖಲೆಗಳನ್ನು ನಿಬಂಧನೆ ಪ್ರಕಾರ ಟೆಂಡರ್-ಕಂ/ಹರಾಜು ಮಾಡಲಾಗುವುದು.

| ಕ್ರಮ ಸಂಖ್ಯೆ. | ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆ | ಇ.ಎಂ.ಡಿ. ಮೊತ್ತ |
|---|---|---|
| 1 | ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆ ಪ್ರವೇಶ ಶುಲ್ಕ | 50,000.00 |

ಸಹ ಕಂದಾಯ ಅಧಿಕಾರಿ (ಪಶ್ಚಿಮ-ಮಾರುಕಟ್ಟೆ),
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

ಬೃಹತ್ ಬೆಂಗಳೂರು ಮಹಾನಗರ ಪಾಲಿಕ
ಅಪೆಂಡಿಕ್ಸ್ ಎ
ಸಾಮಾನ್ಯ ನಿಭಂಧನೆಗಳು

1. ಟೆಂಡರ್‌ದಾರರು/ಬಿಡ್‌ದಾರರು ಟೆಂಡರ್ ನೋಟೀಸ್ ಮತ್ತು ಕೆಳಗೆ ನಿರ್ದೇಶನಗಳನ್ನು ಕರಾರು ಷರತ್ತು ನಿಭಂಧನೆಗಳನ್ನು ನಿಗಾವಹಿಸಿ ಓದಿಕೊಳ್ಳತಕ್ಕದ್ದು. ಓದಿಕೊಂಡ ನಂತರ ಟೆಂಡರ್‌ದಾರರು ಅಪೆಂಡಿಕ್ಸ್‌ಗಳನ್ನು ಮತ್ತು ದರಗಳನ್ನು ಅವಶ್ಯವಿರುವಲ್ಲಿ ಸೂಕ್ತವಾಗಿ ನಮೂದಿಸಿದ ನಂತರ ಸಹಿ ಮಾಡತಕ್ಕದ್ದು.

2. ಎಲ್ಲಾ ನಮೂನೆಗಳನಮ್ಮು ಸ್ಪಷ್ಟ ಬರವಣಿಗೆಯಲ್ಲಿ ಓದುವಂತೆ ಇರಬೇಕು ಯಾವುದೇ ತಿದ್ದುಪಡಿಗಳನ್ನು ಟೆಂಡರ್‌ದಾರರು ಧೃಢೀಕರಿಸಿರಬೇಕು ಅಳಿಸಿರುವ ಅಥವಾ ತಿದ್ದುಪಡಿಗಳನ್ನು ಧೃಢೀಕರಿಸದೇ ಸ್ಪಷ್ಟ ಬರವಣಿಗೆ ಇಲ್ಲದಿರುವಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ದಾರರು/ಬಿಡ್‌ದಾರರು ಸೂಚಿಸುವ ಲೈಸನ್ಸ್ ಫೀ ಧೃಢವಾಗಿರಬೇಕು. ಮತ್ತು ಅಧೋಮುಖವಾದ ಪರಿಷ್ಕರಣೆಗೆ ಯಾವುದೇ ಕಾರಣದಿಂದ ಅವಕಾಶವಿರುವುದಿಲ್ಲ/ ಟೆಂಡರ್‌ದಾರರು ತಾಂತ್ರಿಕ ಮತ್ತು ಹಣಕಾಸು ಬಿಡ್‌ಗಳನ್ನು ಪ್ರತ್ಯೇಕವಾದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು, ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿರುವವರನ್ನು ಮಾತ್ರ ನಿಗಧಿತ ದಿನಾಂಕ/ಸಮಯದಲ್ಲಿ ಹರಾಜಿನಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದು. ಹಣಕಾಸು ಬಿಡ್‌ನ್ನು ತೆರೆಯದೆ ಹರಾಜು ನಡೆಸಲಾಗುವುದು ಮತ್ತು ಹರಾಜು ಹಣಕಾಸು ಬಿಡ್ ಪೈಕಿ ಅತ್ಯಂತ ಹೆಚ್ಚು ಮೊತ್ತ ನಮೂದಿಸಿದ್ದವರನ್ನು ಯಶಸ್ವಿ ಟೆಂಡರ್/ಬಿಡ್‌ದಾರರೆಂದು ಘೋಷಿಸಲಾಗುವುದು. ಸೂಚನೆಗಳನ್ನು ಟೆಂಡರ್‌ದಾರರಿಗೆ ನೀಡಿರುವ ನಮೂನೆಯ ಮೂಲ ಪ್ರತಿಯಲ್ಲಿ ಮಾತ್ರ ಪಾಲಿಸತಕ್ಕದ್ದು, ಯಾವುದೇ ಕಾರಣಕ್ಕೂ ನಕಲಿಯಲ್ಲಿ ಸಲ್ಲಿಸಬಾರದು.

3. ಸೂಚನೆಗಳನ್ನು ಟೆಂಡರ್‌ದಾರರಿಗೆ ನೀಡಿರುವ ನಮೂನೆಯ ಮೂಲ ಪ್ರತಿಯಲ್ಲಿ ಮಾತ್ರ ಸಲ್ಲಿಸತಕ್ಕದ್ದು. ಯಾವುದೇ ಕಾರಣಕ್ಕೂ ನಕಲಿನಲ್ಲಿ ಸಲ್ಲಿಸಬಾರದು.

4. ಷರತ್ತು ವಿಧಿಸಿ ಸಲ್ಲಿಸುವ ಟೆಂಡರ್ ಅಥವಾ ಈ ಟೆಂಡರ್ ಸೂಚನೆಯ ಷರತ್ತು ನಿಭಂಧನೆ ಗಳಿಗೆ ಅನುಗುಣವಾಗಿ ಇಲ್ಲದ ಟೆಂಡರ್‌ಗಳನ್ನು ನೇರವಾಗಿ ತಿರಸ್ಕರಿಸಲಾಗುವುದು.

5. ಈ ಕೆಳಕಂಡ ದಾಖಲೆಗಳು ಗುತ್ತಿಗೆ ಕರಾರಿನ ಭಾಗಗಳಾಗಿ ಸೇರಿರುತ್ತವೆ.
   ಅ) ಟೆಂಡರ್ ನೋಟೀಸ್
   ಆ) ಸೂಚನೆಗಳು (ಟೆಂಡರ್‌ಸಲ್ಲಿಕಾ ಆಫರ್ ಫಾರಂ)
   ಇ) ಅಪೆಂಡಿಕ್ಸ್ ಎ ಮತ್ತು ಬಿ

6. ಟೆಂಡರ್ ಮೊಹರ್ ಮಾಡಿದ ಲಕೋಟೆ ಮೇಲೆ ಪ್ರವೇಶ ಶುಲ್ಕ ಪರವಾನಗಿ ನಡೆಸಲು ಪ್ರಸ್ತಾಪಸಿರುವ ಸ್ಥಳ________________________________________________________ ಎಂದು ನಮೂದಿಸಿ ಟೆಂಡರ್ ನೋಡೀಸಿನಲ್ಲಿ ಸೂಚಿಸಿರುವ ನಿಗಧಿತ ವೇಳೆ ಮತ್ತು ದಿನಾಂಕದೊಳಗೆ ಉಪ ಆಯುಕ್ತರು (ಮಾರುಕಟ್ಟೆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 2ನೇ ಮಹಡಿ, ದಾಸಪ್ಪ ಆಸ್ಪತ್ರೆ ಆವರಣ, ಟೌನ್‌ಹಾಲ್ ಎದುರು, ಬೆಂಗಳೂರು ರವರಿಗೆ ಸಲ್ಲಿಸತಕ್ಕದ್ದು.

7. ಟೆಂಡರ್/ಬಿಡ್‌ದಾರರು ಟೆಂಡರ್ ಸಲ್ಲಿಸುವ ಮುನ್ನ ವಾಹನ ನಿಲ್ಲಿಸುವ ಸ್ಥಳಗಳನ್ನು ಪರಿಶೀಲಿಸ ಲಾಗಿ ಸೂಚಿಸಿದೆ. ಟೆಂಡರ್/ಬಿಡ್‌ದಾರರು ಸ್ಥಳ ಪರಿಶೀಲಿಸಿರಲಿ ಅಥವಾ ಇಲ್ಲದಿರಲಿ ಸ್ಥಳದ ದಾಖಲೆಗಳು ಹಾಗೂ ಇತರ ಮಾಹಿತಗಳ ಬಗ್ಗೆ ಸಂಪೂರ್ಣ ಅರಿವು ಇರುವುದಾಗಿ ತಿಳಿಯಲಾಗುತ್ತದೆ.

8. ಸರಿಯಾಗಿ ಮೊಹರು ಮಾಡಿಲ್ಲದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಟೆಂಡರ್/ ಬಿಡ್‌ದಾರರ ನಗರಪಾಲಿಕೆ ಕಛೇರಿಯಲ್ಲಿ ಟೆಂಡರ್‌ಗಳನ್ನು ಭರ್ತಿಮಾಡುವುದನ್ನು ಅಥವಾ ಸೀಲ್ ಮಾಡುವುದನ್ನು ಅನುಮತಿಸುವುದಿಲ್ಲ.

9. ಟೆಂಡರ್/ಬಿಡ್‌ದಾರರು ಅಥವಾ ಅವರಿಂದ ಅಧಿಕೃತಗೊಂಡ ಪ್ರತಿನಿದಿ ಮಾತ್ರ ಪಾಲುಗೊಳ್ಳಲು ಅನುಮತಿಸಲಾಗುವುದು ಅಧಿಕಾರಿಯುಕ್ತ ಪತ್ರವನ್ನು ಹಾಜರುಪಡಿಸಿದ ಯಾವ ವ್ಯಕ್ತಿಯು ಹರಾಜಿನಲ್ಲಿ ಪಾಲ್ಗೊಳ್ಳುವ ಹಕ್ಕನ್ನು ಹೊಂದಿರುವುದಿಲ್ಲ.

10. ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು ಸ್ಥಳವನ್ನು ನಿರ್ವಹಿಸಲು ಪಡೆಯುವ ಸಾಮಾಗ್ರಿಗಳ ಮೇಲೆ ಎಲ್ಲಾ ವಿಧವಾದ ಶುಲ್ಕ ಮಾರಾಟ ತೆರಿಗೆ ಹಾಗೂ ಕರಗಳನ್ನು ಬರಿಸತಕ್ಕದ್ದು.

11. ಟೆಂಡರ್/ಬಿಡ್‌ಅನ್ನು ಒಪ್ಪಿದ ಪಕ್ಷದಲ್ಲಿ ಕರಾರು ಟೆಂಡರ್‌ದಾರರು/ಬಿಡ್‌ದಾರರು ಸಹಿ ಮಾಡತಕ್ಕದ್ದು. ಮತ್ತು ನೋಂದಾಯಿತ ಪಾಲುದಾರಿಕೆಯ ಸಂಸ್ಥೆಯಾದಲ್ಲಿ ಸಂಸ್ಥೆಯ ವ್ಯವಸ್ಥಾಪಕ ಪಾಲುದಾರಿಕೆಗೆ ಅಥವಾ ಅಧಿಕೃತ ಸಹಿದಾರರು ಮತ್ತು ಕಂಪನಿಯಾದಲ್ಲಿ ಕಂಪನಿಯ ಕಾರ್ಯದರ್ಶಿಗಳು ಅಥವಾ ಅಧಿಕೃತ ಸಹಿದಾರರ ಟೆಂಡರ್‌ನ್ನು ಸಹಿ ಮಾಡತಕ್ಕದ್ದು.

12. ಯಶಸ್ವಿ ಟೆಂಡರ್‌ದಾರರು/ಬಿಡ್‌ದಾರರು ಒಪ್ಪಿದ ಪೂರ್ತಿ ಮೊತ್ತನ್ನು ಒಪ್ಪಿಗೆ ಪತ್ರ ತಲುಪಿದ 5 ದಿವಸಗಳಲ್ಲಿ ಪಾವತಿಸಬೇಕು ಹಾಗೂ ಕರಾರನ್ನು ಸಹಿ ಮಾಡತಕ್ಕದ್ದು. ಹಾಗೂ ಪ್ರವೇಶ ಶುಲ್ಕ ವಸೂಲಾತಿಯ ಕಾರ್ಯವನ್ನು ಕಛೇರಿ ಆದೇಶ ಹೊರಡಿಸಿದ ದಿನಾಂಕದಿಂದ ನಿರ್ವಹಿಸ ತಕ್ಕದ್ದು. ಈ ರೀತಿ ಮಾಡಲು ತಪ್ಪಿದ್ದಲ್ಲಿ ಟೆಂಡರ್ ಷರತ್ತು ಮತ್ತು ನಿಭಂದನೆಗಳನ್ನು ಉಲ್ಲಂಘಿಸಿರುವುದಾಗಿ ಪರಿಗಣಿಸಿ ಇ. ಎಂ. ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳ ಲಾಗುವುದು ಮತ್ತು ಬಿಡ್/ ಟೆಂಡರ್ ಅನ್ನು ತಿರಸ್ಕರಿಸಲಾಗುವುದು

13. ಟೆಂಡರ್/ಬಿಡ್ ಅನ್ನು ಯಾವುದೇ ಕಾರಣ ನೀಡದೆ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರವರು ಹೊಂದಿರುತ್ತಾರೆ.

14. ಟೆಂಡರ್ ತೆರೆದು ಅಥವಾ ಹರಾಜು ಮಾಡಿದ ದಿನದಲ್ಲಿ ಯಾವುದು ನಂತರವೋ ಆ ದಿನದಿಂದ 90 ದಿನಗಳವರೆಗೆ ಬಿಡ್/ಟೆಂಡರ್ ಅನ್ನು ಒಪ್ಪಿಗಾಗಿ ತೆರೆದಿಡಲಾಗುವುದು.

15. ಟೆಂಡರ್ ದಾಖಲೆಗಳನ್ನು ವರ್ಗಾವಣೆ ಮಾಡತಕ್ಕದ್ದಲ್ಲ.

16. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮತ್ತು ಪರವಾನಗಿದಾರರ ಮಧ್ಯೆ ವಿವಾದ ಉಂಟಾದ ಪಕ್ಷದಲ್ಲಿ ವಿವಾದವು ಬೆಂಗಳೂರು ನಗರದ ನ್ಯಾಯಾಲಯದ ವ್ಯಾಪ್ತಿಗೆ ಮಾತ್ರ ಒಳಪಟ್ಟಿರುತ್ತದೆ.

17. ಟೆಂಡರುದಾರರು ತಮ್ಮ ಇತ್ತೀಚಿನ ಭಾವ ಚಿತ್ರವನ್ನು ಟೆಂಡರ್ ಅರ್ಜಿಯಲ್ಲಿ ಲಗತ್ತಿಸಬೇಕು. ಅಲ್ಲದೆ ತಮ್ಮ ನಿವಾಸದ ಮತ್ತು ಕಛೇರಿಯ ವಿಳಾಸ ಮತ್ತು ಟೆಲಿಫೋನ್ ನಂಬರನ್ನು ಸ್ಪಷ್ಟವಾಗಿ ಬರೆಯತಕ್ಕದ್ದು.

18. ಟೆಂಡರ್ ಪರವಾನಗಿಯ ಅವಧಿಯಲ್ಲಿ ಯಾವುದೇ ರೀತಿಯ ನಷ್ಟ ಸಂಭವಿಸಿದರೆ ಮಹಾನಗರ ಪಾಲಿಕೆಯಿಂದ ಯಾವುದೇ ಪರಿಹಾರ ನೀಡಲಾಗುವುದಿಲ್ಲ.

19 ಟೆಂಡರ್ ಅರ್ಜಿ ಸಲ್ಲಿಸುವುದಕ್ಕಿಂತ ಮುಂಚೆ ಮಾರುಕಟ್ಟೆಗಳ ಸ್ಥಳ ಪರಿಶೀಲಿಸಿ ಟೆಂಡರ್ ಅರ್ಜಿ ಸಲ್ಲಿಸತಕ್ಕದ್ದು.

ಸಹಿ/
ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಾನು/ ನಾವು ಸಾಮಾನ್ಯ ನಿಭಂಧನೆಗಳನ್ನು ನಿಗಾವಹಿಸಿ ಓದಿಕೊಳ್ಳಲಾಗಿದ್ದು ಮತ್ತು ಸದರಿ ನಿಭಂಧನೆಗಳನ್ನು ಒಪ್ಪಿರುತ್ತೇನೆ.

ಟೆಂಡರ್‌ದಾರರ ಸಹಿ
(ಮೊಹರಿನೊಂದಿಗೆ)

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಪೆಂಡಿಕ್ಸ್ ಬಿ

ಕರಾರಿನ ನಿಬಂಧನೆ ಮತ್ತು ಷರತ್ತುಗಳು (ತಾಂತ್ರಿಕ ಬಿಡ್‌ಫಾರಂ)

1. ನಗರಪಾಲಿಕೆಯ ಯಶಸ್ವಿ ಟೆಂಡರ್/ಬಿಡ್‌ದಾರರನ್ನು ಇನ್ನು ಮುಂದೆ ಪರವಾನಗಿದಾರರು ಎಂದು ಸೂಚಿಸಿ ಪ್ರವೇಶ ಶುಲ್ಕ ವಸೂಲಾತಿ ಸ್ಥಳವನ್ನು ಪರವಾನಗಿ ಆಧಾರದ ಮೇಲೆ ನಡೆಸಲು ನಮೂದಿತ ದಿನಾಂಕದಿಂದ 1ವರ್ಷದವರೆಗೆ ಎರಡನೇ ಪಾರ್ಟಿಯ ಸ್ವಂತ ಖರ್ಚಿನಲ್ಲಿ ನಿರ್ವಹಿಸುವುದು.

2. ಪರವಾನಗಿದಾರರು ಪ್ರವೇಶ ಶುಲ್ಕ ವಸೂಲಾತಿಯನ್ನು ಪ್ರತಿದಿನ ಆಯುಕ್ತರವರು ನಿಗಧಿ ಗೊಳಿಸಿರುವ ಈ ಕೆಳಕಂಡ ದರದಲ್ಲಿ ಪ್ರವೇಶ ಶುಲ್ಕ ವಸೂಲಿ ಮಾಡತಕ್ಕದ್ದು.

| | | | |
|---|---|---|---|
| 1 | ಹಣ್ಣುಗಳು | 1 ಮಕರಿಗೆ ಅಥವಾ 1 ಪಟ್ಟಿಗೆಗೆ | ರೂ. 1.00 |
| 2 | ಹೂವುಗಳು | 1 ಮಕರಿಗೆ ಅಥವಾ 1 ಪೆಟ್ಟಿಗೆಗೆ | ರೂ. 1.00 |
| 3 | ತರಕಾರಿಗಳು | 1 ಮಕರಿಗೆ ಅಥವಾ 1 ಪೆಟ್ಟಿಗೆಗೆ | ರೂ. 1.00 |
| 4 | ಸೇಬು | 1 ಪೆಟ್ಟಿಗೆಗೆ | ರೂ. 1.00 |
| 5 | ಸೊಪ್ಪುಗಳು | 1 ಟೆಂಪೋಗೆ | ರೂ.20.00 |
| 6 | ಕಡ್ಡಿಪುಡಿ | 1 ಮೂಟೆಗೆ | ರೂ. 1.00 |
| 7 | ಮಿಟಾಯಿ:ಚೌಚೌ | 1 ಮೂರು ಚಕ್ರದ ಲಗ್ಗೇಜ್ | ರೂ.10.00 |
| 8 | ಆಲೂಗಡ್ಡೆ: ಈರುಳ್ಳಿ | 1 ಮೂಟೆಗೆ | ರೂ. 1.00 |
| 9 | ಸೊಪ್ಪು | 1 ಮೂಟೆಗೆ | ರೂ. 1.00 |
| 10 | ಸಪೋಟ | 1 ಮೂಟೆಗೆ | ರೂ. 1.00 |
| 11 | ಕೋಳಿ | 1 ಮಕರಿಗೆ | ರೂ. 1.00 |
| 12 | ಮೀನು:ಮೊಟ್ಟೆ | 1 ಬಾಕ್ಸ್ | ರೂ. 1.00 |
| 13 | ಕಬ್ಬು | 1 ಲಾರಿಗೆ | ರೂ. 1.00 |
| 14 | ತೆಂಗಿನಕಾಯಿ | 1 ಟೆಂಪೋಗೆ | ರೂ.20.00 |

3. ಯಾವುದೇ ಸಂದರ್ಭದಲ್ಲಿ ಮೇಲಿನಂತೆ ನಿಗಧಿಪಡಿಸಿರುವ ಪ್ರವೇಶ ಶುಲ್ಕ ದರಗಳನ್ನು ಪರವಾನಗಿದಾರರು ಮಾನ್ಯ ಅಯುಕ್ತರವರ ಅನುಮೋದನೆ ಇಲ್ಲದೆ ಹೆಚ್ಚಿಸಬಾರದು ಒಂದು ವೇಳೆ ಈ ನಿಭಂಧನೆಯನ್ನು ಉಲ್ಲಂಘಿಸಿದ ಪಕ್ಷದಲ್ಲಿ ಮಾನ್ಯ ಆಯುಕ್ತರು ಅಥವಾ ಅವರಿಂದ ಅನುಮೋದಿಸಲ್ಪಟ್ಟ ಅಧಿಕಾರಿಗಳು ಈ ಕೆಳಕಂಡ ದಂಡ ವಿಧಿಸುವ ಹಕ್ಕನ್ನು ಹೊಂದಿರುತ್ತಾರೆ.

| | |
|---|---|
| ಪ್ರಥಮ ಉಲ್ಲಂಘನೆ | -ರೂ. 25,000/- |
| ದ್ವಿತೀಯ ಉಲ್ಲಂಘನೆ | -ರೂ. 5,000/- |
| ತೃತೀಯ ಉಲ್ಲಂಘನೆ | -ರೂ. 10,000/- |

ನಾಲ್ಕನೇ ಅಥವಾ ಮೇಲ್ಪಟ್ಟ-ಮಾನ್ಯ ಆಯುಕ್ತರವರು ನಿರ್ಣಯಿಸುವಂತೆ ಮತ್ತು ಪರವಾನಗಿಯನ್ನು ರದ್ದು ಪಡಿಸುವ ಅಧಿಕಾರ ಮಾನ್ಯ ಆಯುಕ್ತರು ಕಾಲಕಲಕ್ಕೆ ನಿಗಧಿಪಡಿಸುವ ಸಮಯದಲ್ಲಿ ನಿಲುಗಡೆ ಸ್ಥಳವನ್ನು ಪರವಾನಗಿದಾರರು ತೆಗೆದಿರಬೇಕು.

4. ಪರವಾನಗಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ಬೇಕಾಗುವಂತಹ ಮೇಲ್ವಿಚಾರಣಾ ಹಾಗೂ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳನ್ನು ಒದಗಿಸತಕ್ಕದ್ದು ಹಾಗೂ ಅವರುಗಳಿಗೆ ಸಮವಸ್ತ್ರ ಹಾಗೂ ಗುರುತಿನ ಚೀಟಿಗಳನ್ನು ಒದಗಿಸಿದಲ್ಲಿ ಸಾರ್ವಜನಿಕರು ಗುರುತಿಸಲು ಸಹಕಾರಿಯಾಗಿರುತ್ತಾರೆ.

5. ಪರವಾನಗಿದಾರರು ನಗರ ಪಾಲಿಕೆಯ ಆಯುಕ್ತರಾಗಲೀ, ಅಧಿಕಾರಿಗಳಾಗಲೀ ಅಥವಾ ಆಯುಕ್ತರಿಂದ ನೇಮಿಸಲ್ಪಟ್ಟಿರುವ ಸಿಬ್ಬಂದಿಯಾಗಲೀ ವಾಹನ ನಿಲುಗಡೆಯ ಸ್ಥಳದ ಪರಿಶೀಲನೆಗಾಗಿ ಪ್ರವೇಶಿಸಲು ಅವಕಾಶ ಮಾಡತಕ್ಕದ್ದು ಹಾಗೂ ಅವರುಗಳು ನಿಲುಗಡೆ ಸಂಬಂಧಿಸಿದ ದಾಖಲೆಗಳನ್ನು ಹಾಗೂ ಮಾಹಿತಿಯನ್ನು ಕೇಳಬಹುದಾಗಿರುತ್ತದೆ.

6. ಪರವಾನಗಿದಾರರು ಅಂಟು ರೋಗ ಸಾಂಕ್ರಾಮಿಕ ಅಥವಾ ಆರೋಗ್ಯಕ್ಕೆ ಅಪಾಯಕಾರಿಯಾಗು ವಂತಹ ರೋಗದಿಂದ ನರಳುತ್ತಿರುವ ಯಾವುದೇ ಒಬ್ಬ ವ್ಯಕ್ತಿಯನ್ನು ವಾಹನ ನಿಲುಗಡೆಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ನೇಮಿಸಬಾರದು.

7. ಪರವಾನಗಿದಾರರು ಬಾಲ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಬಾರದು. ಮತ್ತು ಚೈಲ್ಡ್ ಲೇಬರ್ (ಪ್ರಾಹಿಬಷನ್ ಮತ್ತು ರೆಗ್ಯೂಲೇಷನ್)ಆಕ್ಟ್ 1986ರ ಮತ್ತು ಅದರಡಿಯಲ್ಲಿನ ನಿಯಮಾವಳಿಗಳಿಗೆ ಬದ್ಧರಾಗಿರಬೇಕು ಮತ್ತು ಕಾಂಟ್ರಾಕ್ಟ್ ಲೇಬರ್ (ಪ್ರಾಹಿಬಿಷನ್ ಮತು ರೆಗ್ಯೂಲೇಷನ್)ಆಕ್ಟ್ 1970 ಗಳನ್ನು ಪಾಲಿಸತಕ್ಕದ್ದು.

8. ಪರವಾನಗಿದಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ವಿಧಿಸಿರುವ ಹಾಗೂ ಆಗಿಂದಾಗ್ಯೆ ವಿಧಿಸಬಹುದಾದಂತಹ ನಿಯಮ ನಿಭಂದನೆಗಳನ್ನು ಪಾಲಿತಕ್ಕದ್ದು.

9. ಪರವಾನಗಿದಾರರು ತಮಗೆ ಈ ಮೂಲಕ ಮಂಜೂರಾಗಿರುವ ಪರವಾನಗಿಯನ್ನು ಪರಭಾರೆ ಮಾಡಬಾರದು.

10. ಯಾವುದೇ ವ್ಯಕ್ತಿಗೆ ಯಾವುದೇ ವಿಧವಾದ ಹಾನಿ ಅಥವಾ ನಷ್ಟ ಉಂಟಾದಲ್ಲಿ ಪರವಾನಗಿ ದಾರರೆ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

11. ಯಾವುದೇ ತಕರಾರು ಅಥವಾ ಪ್ರಶ್ನೆಗಳು ಉದ್ಭವಿಸುವಂತಹ ಪಕ್ಷದಲ್ಲಿ ಮಾನ್ಯ ಆಯುಕ್ತರವರ ನಿರ್ಣಯವೇ ಅಂತಿಮವಾಗಿರುತ್ತದೆ. ಹಾಗೂ ಪರವಾನಗಿದಾರರು ಈ ನಿರ್ಣಯಕ್ಕೊಳ ಪಟ್ಟಿರುತ್ತದೆ.

12. ಪರವಾನಗಿ ಅವಧಿಯಲ್ಲಿ ಯಾವುದೇ ರೀತಿಯಲ್ಲಿ ನಷ್ಟ ಉಂಟಾದರೆ ಪರವಾನಗಿದಾರರೇ ಜವಾಬ್ದಾರರು.

13. ಟೆಂಡರ್ ಅರ್ಜಿ ಸಲ್ಲಿಸುವುದಕ್ಕಿಂತ ಮುಂಚೆ ಸದರಿ ಮಾರುಕಟ್ಟೆಯ ಸ್ಥಳ ಪರಿಶೀಲನೆ ಮಾಡಿರುತ್ತೇನೆ.

14. ಪರವಾನಗಿಯ ಅವಧಿಯಲ್ಲಿ ಯಾವುದೇ ನಷ್ಟ ಸಂಭವಿಸಿದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಯಾವುದೇ ನಷ್ಟ ಪರಿಹಾರ ನೀಡಲಾಗುವುದಿಲ್ಲ.

15. ಟೆಂಡರ್‌ದಾರರು ಆಧಾಯ ತೆರಿಗೆ ಪಾವತಿ ಮಾಡಿರುವ ಬಗ್ಗೆ ಹಿಂದಿನ 2 ವರ್ಷ ಅವಧಿಗೆ ಆದಾಯ ತೆರಿಗೆ ಇಲಾಖೆಗೆ ಪಾವತಿಸಿರುವ ಕುರಿತು ನಿಗಧಿತ ನಮೂನೆಯ ಕ್ಲಿಯರಿಂಗ್ ಸರ್ಟಿಫಿಕೇಟ್‌ನ್ನು ಸಲ್ಲಿಸುವುದು.

-ಸಹಿ-
ಆಯುಕ್ತರು (ಮಾರುಕಟ್ಟೆ),
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಮೇಲೆ ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ನಾನು/ನಾವು ನಿಗಾವಹಿಸಿ ಓದಿ ಕೊಳ್ಳಲಾಗಿದೆ ಮತ್ತು ಇವುಗಳಿಗೆ ಬದ್ಧನಾಗಲು ಒಪ್ಪಿಕೊಂಡಿರುತ್ತೇನೆ/ವೆ.

ಟೆಂಡರ್‌ದಾರರ ಸಹಿ

(ಮೊಹರಿನೊಂದಿಗೆ)